**<u>ದಿನಾಂಕಃ 01-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ . ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

**<u>ಮುಂದುವೆರದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.ಎಂ ಎಸ್ ಎ ವಕೀಲರಿಂದಃ</u>**

| | | |
|---|---|---|
| ನಿ.ಪಿ-1 | : | ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ, |
| ನಿ.ಪಿ-2 | : | ದೂರಿನ ದೃಢೀಕೃತ ಪ್ರತಿ, |
| ನಿ.ಪಿ-3 | : | ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ, |
| ನಿ.ಪಿ-4 ಮತ್ತು 5 | : | ಐ.ಎಂ.ವಿ ವರದಿಗಳ ದೃಢೀಕೃತ ಪ್ರತಿಗಳು , |
| ನಿ.ಪಿ-6 | : | ಅಂತಿಮ ವರದಿಯ ದೃಢೀಕೃತ ಪ್ರತಿ, |
| ನಿ.ಪಿ-7 ಮತ್ತು 8 | : | 2 ಬೈಕ್ ರಿಪೇರಿ ಬಿಲ್ ಗಳು |
| ನಿ.ಪಿ-9 ರಿಂದ 11 | : | ಮೋಟಾರ್ ಸೈಕಲ್ ನ 3 ಭಾವಚಿತ್ರಗಳು |
| ನಿ.ಪಿ-12 | : | ಆಧಾರ ಕಾರ್ಡನ ನೋಟರೈಜ್ಡ ಪ್ರತಿ,<br>(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) |
| ನಿ.ಪಿ-13 | : | ಪಾನ್ ಕಾರ್ಡನ ನೋಟರೈಜ್ಡ ಪ್ರತಿ,<br>(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) |
| ನಿ.ಪಿ-14 | : | ಬ್ಯಾಂಕ್ ಪಾಸ್ ಬುಕ್ ನ ನೋಟರೈಜ್ಡ ಪ್ರತಿ,<br>(ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) |

ನಿ.ಪಿ–15 ಆರ್.ಸಿ ಕಾರ್ಡ ನ ನೋಟರಿ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)

ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎನ್ ಎಂ ಬಿ .ವಕೀಲರಿಂದಃ**

1. ಅಪಘಾತ ಸಮಯದಲ್ಲಿ ನನ್ನ ಮೋಟಾರ್ ಸೈಕಲ್ ನ್ನು ನನ್ನ ಮಗ ಚಲಾಯಿಸಿಕೊಂಡು ಹೋಗಿದ್ದ. ಅಪಘಾತ ಸಮಯದಲ್ಲಿ ನನ್ನ ಮೋಟಾರ್ ಸೈಕಲ್ಗೆ ಇನ್ಸುರೆನ್ಸ ಇರಲಿಲ್ಲ ಎಂದರೆ ಸರಿ. ಅಪಘಾತ ನನ್ನ ಮಗನ ತಪ್ಪಿನಿಂದಲೆ ಆಗಿದೆ ಎಂದರೆ ಸರಿಯಲ್ಲ. ಪರಿಹಾರ ಬರುವುದಿಲ್ಲ ಎಂದು ಕಾರಿನವರ ಮೇಲೆ ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2014 ರಲ್ಲಿ ನಾನು ಆ ಮೋಟಾರ್ ಸೈಕಲ್ ನ್ನು ಖರೀದಿಸಿದ್ದೆನು. ರಿಪೇರಿ ಮಾಡುವ ಪೂರ್ವದಲ್ಲಿ ನನ್ನ ಮೋಟಾರ್ ಸೈಕಲ್ಲನ್ನು ಸರ್ವೆ ಮಾಡಿಸಿರುವುದಿಲ್ಲ, ಆರ್ ಟಿ ಒ ಇನ್ಸಪೆಕ್ಟರ್ ನೋಡಿ ಪರಿಶೀಲನೆ ಮಾಡಿರುತ್ತಾರೆ. ಐ ಎಂ ವಿ ವರದಿಯಲ್ಲಿ ಏನು ಡ್ಯಾಮೇಜ್ ಆಗಿದೆ ಎಂದು ಮಾತ್ರ ನಮೂದಿರುತ್ತದೆ ಎಂದರೆ ಸರಿ. ಐ ಎಂ ವಿ ವರದಿಯಲ್ಲಿ ಎಡಭಾಗದ ಫೂಟ್ ರೆಸ್ಟ , ಎಡಭಾಗದ ಫ್ಯೂಯಲ್ ಟ್ಯಾಂಕ್, ಎಡಭಾಗದ ಕವರ್ ಡ್ಯಾಮೇಜ್ ಆಗಿದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಂಪೂರ್ಣ ಜಖಂ ಆಗಿತ್ತು ಎಂದು ಹೇಳುತ್ತಾರೆ.

2. ಮೋಟಾರ್ ಸೈಕಲ್ ಭಾವಚಿತ್ರಗಳ ಬಾಪ್ತು ಸಿ.ಡಿ ಹಾಜರು ಪಡಿಸಿರುವುದಿಲ್ಲ. ಭಾವಚಿತ್ರದಲ್ಲಿ ನನ್ನ ಮೋಟಾರ್ ಸೈಕಲ್ ಸಂಖ್ಯೆ ಕಾಣುವುದಿಲ್ಲ ಎಂದರೆ ಸರಿ. ವಾಹನದ ಐ ಡಿ ವಿ ಆಧಾರದ ಮೇಲೆ ಡ್ಯಾಮೇಜ್ಸ್ ಲೆಕ್ಕ ಹಾಕುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾಹನ ಎಷ್ಟು ಯುಸೇಜ್ ಆಗಿತ್ತು ಎನ್ನುವ ಆಧಾರದ ಮೇಲೆ ಸಾಲ್ ವೇಜಸ್ ತೆಗೆಯುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾಹನದ ಮಾಡೆಲ್ ಆಧಾರದ ಮೇಲೆ ಐ ಡಿ ವಿ ಕಡಿಮೆ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಿಪೇರಿ ಕಾಲಕ್ಕೆ ಯಾವ ಪಾರ್ಟಗಳನ್ನು ಮರುಜೋಡನೆ ಮಾಡಬಹುದು, ಯಾವ ಪಾರ್ಟ ಮರುಜೋಡನೆ ಮಾಡಲು ಬರುವುದಿಲ್ಲ ಎನ್ನುವ ಬಗ್ಗೆ ಸರ್ವೆಯರ್ ವರದಿ ಬೇಕಾಗುತ್ತದೆ ಎಂದರೆ ಸಾಕ್ಷಿ ಆರ್ ಟಿ ಒ ದವರು ಪರಿಶೀಲಿಸಿರುತ್ತಾರೆ ಎಂದು ಹೇಳುತ್ತಾರೆ. ಐ ಎಂ ವಿ ಇನ್ಸಪೆಕ್ಟರ್ ವರದಿಯಲ್ಲಿ ಏನು ಡ್ಯಾಮೇಜ್ ಆಗಿದೆ ಎಂದು ಮಾತ್ರ ನಮೂದಿರುತ್ತದೆ ಹೊರತು ಎಷ್ಟು ಲುಕ್ಸಾನ್ ಆಗಿದೆ ಎಂದು ನಮೂದಿರುವುದಿಲ್ಲ ಎಂದರೆ ಸರಿ. ಎಸ್ಟಿಮೇಟ್ ಮಾಡಿಸಿರುವುದಿಲ್ಲ ಎಂದರೆ ಸರಿ. ನನ್ನ ಗಾಡಿ ಮೊದಲೆ ಹಾಳಾಗಿತ್ತು ಅದನೆಲ್ಲಾ ಸೇರಿಸಿ ರಿಪೇರಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಹಾಜರು ಪಡಿಸಿದ ಬಿಲ್ ಗಳಲ್ಲಿ ಸಾಲ್ವೇಜ್‌ಸ್ ಕಳೆದ ಬಗ್ಗೆ ನಮೂದಿರುವುದಿಲ್ಲ ಎಂದರೆ ಸರಿ. ನಿಪಿ-7 ಮತ್ತು 8 ರಲ್ಲಿ ವೈಹಿಕಲ್ ನಂಬರ್ ಮತ್ತು ಮಾಲಿಕ ಹೆಸರು ಇರುವುದಿಲ್ಲ ಎಂದರೆ ಸರಿ. ವಾಹನ ರಿಪೇರಿ ಮಾಡಿದವರು ಆಥರೈಜ್ಡ್ ಡೀಲರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ದಲ್ಲಿ ನನ್ನ ಮೋಟಾರ್ ಸೈಕಲ್ ಗೆ ಯಾವುದೇ ಡ್ಯಾಮೇಜ್ ಆಗಿರುವುದಿಲ್ಲ ಆದ್ದರಿಂದ ಸರಿಯಾದ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ಖೊಟ್ಟಿ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ಕಾರ್ ಚಾಲಕನಿಗೆ ಡ್ರೈವಿಂಗ್ ಲೈಸನ್ಸ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.